**SINDHI HIGH SCHOOL, HEBBAL**
**Periodic Test - 1 [2025-26]**
**Subject: L2 Kannada**

**Class: VIII** | **Max. Marks: 30**
**Date: 21/07/2025** | **Reading time: 8:25 am to 8:35 am**
**No. of sides: 2** | **Writing Time: 8:35 am to 9:35 am**

---

**ಸೂಚನೆಗಳು:**

- ಪ್ರಶ್ನೆಪತ್ರಿಕೆಯಲ್ಲಿ ಒಟ್ಟು 6 ಮುಖ್ಯ ಪ್ರಶ್ನೆಗಳಿರುತ್ತವೆ.
- ಪ್ರತಿಯೊಂದು ಪ್ರಶ್ನೆಗಳ ಸೂಚನೆಗಳನ್ನು ಸರಿಯಾಗಿ ಓದಿಕೊಂಡು ಉತ್ತರಿಸಿ.
- ಪ್ರಶ್ನೆ ಮತ್ತು ಉಪಪ್ರಶ್ನೆಗಳ ಸಂಖ್ಯೆಯನ್ನು ತಪ್ಪಿಲ್ಲದೆ ಬರೆಯಿರಿ.

---

**I. ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.** **(5x1=5)**

ಪ್ರಾಚೀನ ಭಾರತವು ಕಲಿಕೆಗೆ ಪ್ರಖ್ಯಾತವಾದ ದೇಶವಾಗಿತ್ತು. ಅದಕ್ಕೆ ವೇದಗಳು, ಉಪನಿಷತ್ತುಗಳು, ಸಂಸ್ಕೃತವೇ ಸಾಕ್ಷಿ. ಜ್ಞಾನವಷ್ಟೇ ಅಲ್ಲದೆ ಯೋಗ ಶಿಕ್ಷಣಕ್ಕೂ ಪ್ರಾಚೀನರು ಆದ್ಯತೆ ನೀಡಿದ್ದರು. ಹೀಗಾಗಿ ದೇಹ ಮತ್ತು ಮನಸ್ಸಿನ ಆರೋಗ್ಯ ಸದೃಢವಾಗಲು ಸಹಾಯಕವಾಯಿತು. ಇಂದಿನ ಅನೇಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಇನ್ನೂ ನಾಗರೀಕತೆಯ ಹೊಸ್ತಿಲು ಮೆಟ್ಟುವ ಮೊದಲೇ ಭಾರತವು ವಿಜ್ಞಾನ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿತ್ತು.

ಯೋಗ ಶಿಕ್ಷಣವು ದೈಹಿಕ-ಮಾನಸಿಕ ವಿಕಾಸಕ್ಕೆ ಸಾಧನವಾಗಿದೆ. ಮಾನವನ ದೇಹದ ಪ್ರತಿಯೊಂದು ವಲಯದ ಸಕ್ರಿಯ ಚಟುವಟಿಕೆಗೆ ಯೋಗ ಶಿಕ್ಷಣವು ಆದ್ಯತೆ ನೀಡುವುದಲ್ಲದೆ, ವೃದ್ಧಾಪ್ಯದಲ್ಲಿ ಸಂಭವಿಸಬಹುದಾದ ಅನೇಕ ದೈಹಿಕ-ಮಾನಸಿಕ ಕಾಯಿಲೆಗಳಿಗೆ ಸವಾಲಾಗಿ ನಿಲ್ಲುವ ಸಾಮರ್ಥ್ಯವನ್ನು ವೃದ್ಧಿಸುತ್ತದೆ. ಅಷ್ಟೇ ಅಲ್ಲದೆ ಚಿಕ್ಕವಯಸ್ಸಿನಲ್ಲಿಯೇ ಯೋಗ ಪಾಠವನ್ನು ಮಕ್ಕಳಿಗೆ ಕಲಿಸುವುದರಿಂದ ಅವರಲ್ಲಿ ಮೆದುಳು, ಕಣ್ಣು ಮೊದಲಾದ ಸೂಕ್ಷ್ಮ ಅಂಗಗಳು ಚುರುಕುಗೊಳ್ಳಲು ಸಹಾಯ ಮಾಡುತ್ತದೆ. ಇಂದು ಭಾರತ ದೇಶದ ಅನೇಕ ಶಾಲೆಗಳು ಪ್ರಾಥಮಿಕ, ಪ್ರೌಢಶಿಕ್ಷಣದಲ್ಲಿ ಯೋಗ ಶಿಕ್ಷಣವನ್ನು ಕಡ್ಡಾಯಗೊಳಿಸಿದೆ. ಯೋಗದ ನಿರಂತರ ಅಭ್ಯಾಸದಿಂದ ಮನೋನಿಯಂತ್ರಣ, ಇಂದ್ರಿಯ ನಿಗ್ರಹ, ಅಧಿಕ ಕಾರ್ಯೋತ್ಸಾಹ ಮೊದಲಾದ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಬಹುದು. ಯೋಗಾಭ್ಯಾಸವನ್ನು ಪ್ರತಿಯೊಬ್ಬರು ಅಭ್ಯಾಸಮಾಡಿ ಆಚರಣೆಯಲ್ಲಿರಿಸಿಕೊಂಡರೆ ಇಡೀ ದೇಶ ಎದುರಿಸುತ್ತಿರುವ ಅನೇಕ ನೈತಿಕ ಸವಾಲುಗಳನ್ನು ಎದುರಿಸಲು ಸಾಧ್ಯವಾಗುತ್ತದೆ.

ಯೋಗ ಶಿಕ್ಷಣವು ಸಾಂಪ್ರದಾಯಿಕ ಶಿಕ್ಷಣವೆಂಬ ಕಾರಣದಿಂದ ಅನೇಕರು ಇದನ್ನು ಹೀಗಳೆಯುವುದುಂಟು. ಆದರೆ ಯೋಗ ಶಿಕ್ಷಣದ ಮಹತ್ವವನ್ನು ಅರಿತ ಅನೇಕ ಅಭಿವೃದ್ಧಿ ಹೊಂದಿದ ದೇಶಗಳು ಯೋಗ ಶಿಕ್ಷಣವನ್ನು ತಮ್ಮ ನೆಲದಲ್ಲಿ ಅಳವಡಿಸಿವೆ. ಹೀಗೆ ಯೋಗ ಶಿಕ್ಷಣವನ್ನು ಅಳವಡಿಸುವುದರಿಂದ ಶಿಸ್ತಿನ ಜೀವನ ನಡೆಸಲು ಸಾಧ್ಯವಾಗುತ್ತದೆ.

**ಪ್ರಶ್ನೆಗಳು:**

**1.** ದೇಹ ಮತ್ತು ಮನಸ್ಸಿನ ಆರೋಗ್ಯ ಸದೃಢವಾಗಲು ಸಹಾಯಕವಾಗುವ ಶಿಕ್ಷಣ ಇದಾಗಿದೆ__________
A. ಜ್ಯೋತಿಷ್ಯ  B. ಛಂದಸ್ಸು  C. ಯೋಗ  D. ವ್ಯಾಕರಣ

**2.** ಯೋಗ ಶಿಕ್ಷಣವನ್ನು ಅಳವಡಿಸುವುದರಿಂದ ______________ಜೀವನ ನಡೆಸಲು ಸಾಧ್ಯವಾಗುತ್ತದೆ.
A. ಸ್ವಚ್ಛತೆಯ  B. ಶಿಸ್ತಿನ  C. ಸಾಮಾಜಿಕ  D. ರಾಜಕೀಯ

**3.** ಶಿಕ್ಷಣ ಇಲಾಖೆಯು ಯಾವ ಹಂತದಲ್ಲಿ ಯೋಗ ಶಿಕ್ಷಣವನ್ನು ಕಡ್ಡಾಯಗೊಳಿಸಿದೆ?
A. ಪ್ರಾಥಮಿಕ- ಪ್ರೌಢ ಶಿಕ್ಷಣ  B. ಪ್ರೌಢ- ಪದವಿ ಪೂರ್ವ ಶಿಕ್ಷಣ
C. ಪದವಿ- ಪ್ರೌಢ ಶಿಕ್ಷಣ  D. ಪ್ರಾಥಮಿಕ- ಪದವಿ ಶಿಕ್ಷಣ

**4.** ಯೋಗ ಪಾಠವನ್ನು ಮಕ್ಕಳಿಗೆ ಕಲಿಸುವುದರಿಂದ ಯಾವ ಅಂಗಗಳು ಚುರುಕುಗೊಳ್ಳುತ್ತದೆ?
A. ಕೈ- ಕಾಲು  B. ಮೆದುಳು- ಕಣ್ಣು  C. ಕರುಳು- ಹೃದಯ  D. ಕಣ್ಣು-ಕಿವಿ

**5.** ಯೋಗ ಶಿಕ್ಷಣವು __________________ ವಿಕಾಸಕ್ಕೆ ಸಾಧನವಾಗಿದೆ.
A. ಮಾನಸಿಕ- ನೈತಿಕ  B. ನೈತಿಕ- ದೈಹಿಕ
C. ದೈಹಿಕ- ಜಾಗತಿಕ  D. ದೈಹಿಕ- ಮಾನಸಿಕ

**II. ಕೆಳಗೆ ನೀಡಲಾಗಿರುವ ವ್ಯಾಕರಣಾಂಶಗಳ ಬಹುಆಯ್ಕೆಯ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ:** **(5X1=5)**

1. 'ಗೌಪ್ಯ' - ಪದದ ಸಮಾನಾರ್ಥಕ ಪದ ________________
   A. ಗೌರವ B. ರಹಸ್ಯ C. ನಿರ್ಗತಿಕ D. ಶರೀರ

2. 'ಆರೋಗ್ಯ'- ಈ ಪದದ ವಿರುದ್ಧಾರ್ಥಕ ಪದ______________
   A. ಅನಾರೋಗ್ಯ B. ಅಪರೋಗ್ಯ C. ನಿರೋಗ್ಯ D. ಸದಾರೋಗ್ಯ

3. 'ರಥೋತ್ಸವ' - ಪದವು ಕೆಳಗಿನ ಈ ಸಂಧಿಗೆ ಉದಾಹರಣೆಯಾಗಿದೆ.
   A. ಲೋಪ ಸಂಧಿ B. ಸವರ್ಣದೀರ್ಘ ಸಂಧಿ C. ಆದೇಶ ಸಂಧಿ D. ಗುಣ ಸಂಧಿ

4. 'ಪ್ರಸಾದ' -ಈ ಪದದ ತದ್ಭವ ರೂಪ:
   A. ಅಸದ B. ನಿಸದ C. ಹಸಾದ D. ಪಸದ

5. 'ಮನೆಗೆ ಬಂದ ಅತಿಥಿಗಳಿಗೆ ಘಮಘಮಿಸುವ, ರುಚಿರುಚಿಯಾದ ಭಕ್ಷ್ಯ ಭೋಜ್ಯಗಳನ್ನು ನೀಡುತ್ತಿದ್ದರು'. – ಈ ವಾಕ್ಯದಲ್ಲಿರುವ ಜೋಡಿಪದವನ್ನು ಬರೆಯಿರಿ.
   A. ಘಮಘಮಿಸುವ B. ರುಚಿರುಚಿಯಾದ
   C. ಭಕ್ಷ್ಯ ಭೋಜನಗಳು D. ಮನೆಗೆ ಬಂದ

**III. ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ:** **(3X1=3)**

1. 'ವಿದ್ಯಾರ್ಥಿನಿಯರು ಸಂಗೀತದ ಪಾಠವನ್ನು ಕಲಿಯುತ್ತಿದ್ದರು.'- ವಚನ ಬದಲಿಸಿ ಬರೆಯಿರಿ.
2. 'ಬಾಲಕರು ಆಟದ ಮೈದಾನದಲ್ಲಿ ಜೋರಾಗಿ ಕಿರುಚುತ್ತಾ ಆಟವಾಡಿದರು'. - ಭವಿಷ್ಯತ್ ಕಾಲದಲ್ಲಿ ಬರೆಯಿರಿ.
3. 'ಅಡ್ಡಬಾಯಿ' – ಈ ನುಡಿಗಟ್ಟಿನ ಪದವನ್ನು ಬಳಸಿ ಸ್ವಂತ ವಾಕ್ಯವನ್ನು ರಚಿಸಿರಿ.

**IV. ನಿಮ್ಮ ನೆಚ್ಚಿನ ಪುಸ್ತಕವನ್ನು ಕುರಿತು ನಿಮ್ಮ ಗೆಳೆಯ/ ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.** **(1X4=4)**

**V. ಕೆಳಗಿನ ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ.** **(2X2=4)**

1. ಲೇಖಕರ ಹುಟ್ಟೂರಿನಲ್ಲಿದ್ದ ಮುಸ್ಲಿಂ ಧಾರ್ಮಿಕ ಉತ್ಸವದ ಸಂಪ್ರದಾಯವೇನು?
2. ಕನ್ನಡ ನಾಡಿನ ಪ್ರಕೃತಿ ವೈಶಿಷ್ಟ್ಯವೇನು?

**VI. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು- ಐದು ವಾಕ್ಯಗಳಲ್ಲಿ ಉತ್ತರಿಸಿ.** **(3X3=9)**

1. ನವೀನ ಶಿಕ್ಷಣದ ವೈಶಿಷ್ಟ್ಯಗಳೇನು?
2. ಕವಿ ಕನ್ನಡ ತಾಯಿಯಲ್ಲಿ ಏನೆಂದು ಕೋರುತ್ತಾರೆ?
3. **ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

"ನಿಮ್ಮ ಹಳೆಯ ಶಿಷ್ಯನಿಗೆ ಇದೊಂದು ಉಪಕಾರ ಮಾಡಿ"

**ಅಥವಾ**

"ನಿನ್ನ ಕಲ್ಲೇ ನುಡಿವುದಲ್ಲ"

********************